# ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿಕ ವಿಶ್ವೇಶ್ವರ ನಾರಾಯಣ ಭಟ್ಟ

ಹೆಸರು:–ವಿಶ್ವೇಶ್ವರ ನಾರಾಯಣ ಭಟ್ಟ
ಗ್ರಾಮ:– ಏಕಾನ್, ಹಂಸನಗದ್ದೆ
ತಾಲ್ಲೂಕು:– ಯಲ್ಲಾಪುರ
ಜಿಲ್ಲೆ:– ಉತ್ತರ ಕನ್ನಡ
ಮೊ.ನಂ:– 9482185769

## ವಿಶೇಷ ಸಾಧನೆಗಳು :

- ವಿಶ್ವೇಶ್ವರ ನಾರಾಯಣ ಭಟ್ಟರು ಒಟ್ಟು 14 ಎಕರೆ ಸಾಗುವಳಿ ಭೂಮಿಯನ್ನು ಹೊಂದಿದ್ದು ಅದರಲ್ಲಿ ಅಡಿಕೆ, ತೆಂಗು, ಹಲಸು, ಮಾವು, ಬಾಳೆ, ಮೆಣಸು, ಏಲಕ್ಕಿ, ಕೊಕ್ಕೊ, ಜಾಯಿಕಾಯಿ, ತರಕಾರಿಗಳನ್ನು ಬೆಳೆಯುವುದಲ್ಲದೇ ರಾಗಿ, ಶ್ರೀಗಂಧ, ಸಾಗವಾನಿ, ಗಾಳಿಮರಗಳನ್ನು ಸಹ ಬೆಳೆದಿದ್ದಾರೆ.
- ಇದಲ್ಲದೇ ಜೇನು ಸಾಗಾಣಿಕೆ, ಅರಗು ಕೃಷಿ, ಹೈನುಗಾರಿಕೆಯನ್ನು ಸಹ ಮಾಡುತ್ತಿದ್ದಾರೆ.
- ಸಾವಯುವ ಕೃಷಿ ನಂಬಿರುವ ಇವರು ಜೈವಿಕ ಗೊಬ್ಬರ, ಜೈವಿಕ ಅನಿಲ ಘಟಕ, ಜೀವಾಮೃತ ಘಟಕ ಬಯೋಡೈಜೆಸ್ಟರ್‌ಗಳನ್ನು ಬಳಸುತ್ತಿದ್ದಾರೆ.
- ಕೃಷಿಯಲ್ಲಿ ಉತ್ತಮ ವಾರ್ಷಿಕ ಆದಾಯ ಇರುವ ಕೃಷಿಯನ್ನು ದೇವರೆಂದು ನಂಬಿದ್ದಾರೆ.





# ಜಿಲ್ಲಾ ಮಟ್ಟದ ಶ್ರೇಷ್ಠ ಕೃಷಿ ಮಹಿಳೆ ರಾಧಾ ರಮೇಶ ಹೆಗಡೆ

ಹೆಸರು:- ರಾಧಾ ರಮೇಶ ಹೆಗಡೆ
ಗ್ರಾಮ:- ಕಾನಗೋಡ
ತಾಲ್ಲೂಕು:- ಶಿರಸಿ
ಜಿಲ್ಲೆ:- ಉತ್ತರ ಕನ್ನಡ
ಮೊ.ನಂ:- 9449905813

## ವಿಶೇಷ ಸಾಧನೆಗಳು :

- ಎಸ್.ಎಸ್.ಎಲ್.ಸಿ ಮಾಡಿರುವ ರಾಧಾ ರಮೇಶ ಹೆಗಡೆಯವರ 3.2 ಎಕರೆ ಕ್ಷೇತ್ರದಲ್ಲಿ ಬಹು ಬೆಳೆಗಳು ರಾರಾಜಿಸುತ್ತಿವೆ.
- ಸಾಂಬಾರು ಬೆಳೆಗಳಾದ ಕಾಳು ಮೆಣಸು, ಜಾಯಿಕಾಯಿ, ಲವಂಗ, ಏಲಕ್ಕಿ ಮುಂತಾದ ಬೆಳೆಗಳನ್ನು ಅಡಿಕೆ ಹಾಗೂ ಬಾಳೆಗಳ ಮಧ್ಯ ಮಿಶ್ರ ಬೆಳೆಯಾಗಿ ಬೆಳೆಯುತ್ತಿದ್ದಾರೆ.
- ಹಣ್ಣಿನ ಬೆಳೆಗಳಾದ ಚಿಕ್ಕು, ಮಾವು, ಹಲಸು, ಕಂಚಿ ನಿಂಬೆ, ಸಿಹಿಕಂಚಿ ಸಹ ಸಮೃದ್ಧವಾಗಿ ಬೆಳೆದಿವೆ.
- ಔಷಧೀಯ ಸಸ್ಯಗಳಾದ ಒಂದೆಲಗ, ಬಜೆ, ಎಲವರಿಗೆ, ಸರ್ಪಗಂಧಿ, ಪುಷ್ಕರ ಮೂಲ, ಅಮೃತ ಬಳಿ, ಮಧುನಾಶಿನಿ, ಕರ್ಪೂರ, ತುಳಸಿಗಳು ಇವರ ತೋಟಕ್ಕೆ ಮೆರಗು ಕೊಟ್ಟಿದೆ.
- ಹೈನುಗಾರಿಕೆಯಲ್ಲಿ ಕೆ.ಎಮ್.ಎಫ್ ನಿಂದ ಪ್ರಶಸ್ತಿ ಪಡೆದಿರುವ ಇವರ ಬಳಿ 3 ಹಿಂಡುವ ದನಗಳು ಹಾಗೂ 3 ಹೆಚ್.ಎಫ್ ಮಿಶ್ರ ತಳಿ ಇವೆ.
- ಇವರ ವಾರ್ಷಿಕ ವರಮಾನ ಸರಾಸರಿ 7,42,000 ಇದ್ದು, ಕೃಷಿಯಲ್ಲೂ ಲಾಭವಿದೆ ಎಂದು ಘಂಟಾಘೋಷವಾಗಿ ಹೇಳುತ್ತಾರೆ.



